# 3 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ಹಾಗೂ ಸಿಬಿಐ/ಎಸಿಬಿ/ಲೋಕಾಯುಕ್ತ ಪ್ರಕರಣಗಳ ವಿಶೇಷ ನ್ಯಾಯಾಲಯ, ಧಾರವಾಡ ಇವರಲ್ಲಿ

## ಎಸ್.ಸಿ. ಸಂಖ್ಯೆ 58/2025

**ಫಿರ್ಯಾದಿದಾರರು :** **ಕರ್ನಾಟಕ ರಾಜ್ಯದ ಪರವಾಗಿ,**
**ಪಿ.ಐ., ಕಲಘಟಗಿ ಪೊಲೀಸ್ ಠಾಣೆ.**

**ವಿರುದ್ಧ**

**ಆರೋಪಿ** 2. **ಮಂಜುನಾಥ ದ್ಯಾಮನಗೌಡ ಪಾಟೀಲ,**
**ವಃ 40 ವರ್ಷ, ವಾಸಃ ಕುರವಿನಕೊಪ್ಪ**
**ಗ್ರಾಮ, ತಾಃ ಕಲಘಟಗಿ.**

## ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 351 ರಡಿಯಲ್ಲಿ ಆರೋಪಿಯ ಹೇಳಿಕೆ.

ಪ್ರಶ್ನೆಃ 1) ನ್ಯಾಯಾಲಯದಲ್ಲಿ ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಯನ್ನು ನೀವು ಕೇಳಿದ್ದೀರಾ?

ಉತ್ತರಃ

ಪ್ರಶ್ನೆಃ 2) ಅ.ಸಾ.6 ಡಾ. ನಿತೇಶ ದನಮಾಲ ಜೈನ್ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ 30.12.2024 ರಂದು ಸಿ.ಡಬ್ಲ್ಯು-5 ಸಂಜೆ 5.02-ಕ್ಕೆ ದಾಳಿಯ ಹಿನ್ನೆಲೆ ಮೇರೆಗೆ ಬಂದಿದ್ದು, ಪರೀಕ್ಷೆಯಲ್ಲಿ ಅವರು ಈ ಕೆಳಗಿನವುಗಳನ್ನು ಕಂಡುಕೊಂಡಿದ್ದು, 1. ಬಲ ಮೇಲಿನ ಬೆನ್ನಿನಲ್ಲಿ 2 x 1 ಸೆಂ. ಮೀ. ಅಳತೆಯ ಚೂರಿ ಗಾಯ, 2. ಚೂರಿ ಗಾಯ: ಬಲ ಭುಜದ ಕೆಳಗೆ ಸ್ಕ್ಯಾಪುಲರ್ ಪ್ರದೇಶದ ಅಳತೆ 4 x 1 ಸೆಂ. ಮೀ. 3. ಎಡ ಮೇಲಿನ ಬೆನ್ನಿನ ಮೇಲೆ 3 x 1 ಸೆಂ. ಮೀ. ಅಳತೆಯ ಚೂರಿ ಗಾಯ, 4. ಎಡಭಾಗದ ಹಿಂಭಾಗದಲ್ಲಿ 7 ನೇ ಕಶೇರುಖಂಡದ ಬಳಿ 1 x 1 ಸೆಂ. ಮೀ. ಅಳತೆಯ ಚೂರಿ ಗಾಯ, 5. ಎದೆಯ ಎಡಭಾಗದಲ್ಲಿ 5 x 2 ಸೆಂ. ಮೀ. ಅಳತೆಯ ಚೂರಿ ಗಾಯ, ಮೇಲೆ ತಿಳಿಸಿದ ಎಲ್ಲಾ ಗಾಯಗಳೂ ಕೆಂಪು ಬಣ್ಣದ್ದಾಗಿರುತ್ತವೆ, ಎದೆಯ ಸಿ.ಟಿ. ಸ್ಕ್ಯಾನ್ ಮಾಡಲಾಯಿತು, ಅದು ಬಲಭಾಗದ ಮೇಲಿನ ವಲಯದ ಭಾಗಶಃ ಕುಸಿತದೊಂದಿಗೆ ಬಲಭಾಗದ ಹೈಡ್ರೋ

ನ್ಯೂಮೋಥೊರಾಕ್ಸ್ ಅನ್ನು ತೋರಿಸುತ್ತದೆ, ಮೈಲಾರಪ್ಪ ಅವರನ್ನು 30.12.2024 ರಂದು ದಾಖಲಿಸಿಕೊಳ್ಳಲಾಯಿತು ಮತ್ತು 11.01.2025 ರಂದು ಬಿಡುಗಡೆ ಮಾಡಲಾಯಿತು ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ3) ಅ.ಸಾ.6 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪರೀಕ್ಷೆಯ ನಂತರ ಅವರು ಈ ಕೆಳಗಿನ ಗಾಯಗಳು 1 ರಿಂದ 3 ನೇ ವಿಧವು ಗಂಭೀರವಾದ ಗಾಯಗಳಾಗಿವೆ ಎಂದು ಅಭಿಪ್ರಾಯಪಟ್ಟಿದ್ದು, 4 ಮತ್ತು 5 ಸರಳವಾದ ಸ್ವಭಾವದವು, ತೀಕ್ಷ್ಣವಾದ ವಸ್ತುವಿನ ಸಂಪರ್ಕದಿಂದ ಈ ಗಾಯಗಳು ಉಂಟಾಗಿರಬಹುದು, ಗಾಯಗಳ ವಯಸ್ಸು 6 ಗಂಟೆಗಳಿಗಿಂತ ಕಡಿಮೆ ಇದೆ, ಈ ಕುರಿತು ಅವರು ಗಾಯದ ಪ್ರಮಾಣಪತ್ರವನ್ನು ನೀಡಿದ್ದೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ4) ಅ.ಸಾ.6 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 30.12.2024 ರಂದು ಸಿ.ಡಬ್ಲ್ಯೂ-1 ಸಂಜೆ 5.10-ಕ್ಕೆ ದಾಳಿಯ ಹಿನ್ನೆಲೆ ಮೇರೆಗೆ ಬಂದಿದ್ದು, ಪರೀಕ್ಷೆಯಲ್ಲಿ ಅವರು ಈ ಕೆಳಗಿನವುಗಳನ್ನು ಕಂಡುಕೊಂಡಿದ್ದು, 1. ಕತ್ತರಿಸಿದ ಗಾಯವು ಬಲ ಹೆಬ್ಬೆರಳಿನ ಮೇಲೆ 2 x 1 ಸೆಂ.ಮೀ. ಅಳತೆಯಿದೆ, 2. ಕತ್ತರಿಸಿದ ಗಾಯವು ಬಲ ಉಂಗುರ ಬೆರಳಿನ ಮೇಲೆ 2 x 1 ಸೆಂ. ಮೀ. ಅಳತೆಯಿದೆ, 3. ಕತ್ತರಿಸಿದ ಗಾಯವು ಬಲ ತೋಳಿನ ಬೆರಳಿನ ಮೇಲೆ 2 x 1 ಸೆಂ. ಮೀ. ಅಳತೆಯದ್ದಾಗಿದೆ, 4. ಎಡದ ಚಿಕ್ಕ ಬೆರಳಿನ ಮೇಲೆ 3 x 1 ಸೆಂ. ಮೀ. ಅಳತೆಯ ಗಾಯ, 5. ಕತ್ತರಿಸಿದ ಗಾಯವು ಎಡ ಮಣಿಕಟ್ಟಿನ ಮೇಲೆ ಅಳತೆ ಮಾಡಲಾಗಿದೆ ಎರಡು x ಒಂದು ಸೆಂಟಿಮೀಟರ್, ಮೇಲೆ ತಿಳಿಸಿದ ಎಲ್ಲಾ ಗಾಯಗಳೂ ಕೆಂಪು ಬಣ್ಣದ್ದಾಗಿರುತ್ತವೆ, ಬಸವರಾಜ್ ಅವರನ್ನು 30.12.2024 ರಂದು ದಾಖಲಿಸಿಕೊಳ್ಳಲಾಯಿತು ಮತ್ತು 02.01.2025 ರಂದು ಬಿಡುಗಡೆ ಮಾಡಲಾಯಿತು ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ5) ಅ.ಸಾ.6 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪರೀಕ್ಷೆಯ ನಂತರ ಅವರು ಮೇಲಿನ ಎಲ್ಲಾ ಗಾಯಗಳು ಸರಳ ಸ್ವರೂಪದ್ದಾಗಿವೆ ಎಂದು ಭಾವಿಸಿ, ತೀಕ್ಷ್ಣವಾದ ವಸ್ತುವಿನ ಸಂಪರ್ಕದಿಂದ

ಈ ಗಾಯಗಳು ಉಂಟಾಗಿರಬಹುದು, ಗಾಯಗಳ ವಯಸ್ಸು 6 ಗಂಟೆಗಳಿಗಿಂತ ಕಡಿಮೆ ಇದೆ, ಈ ಕುರಿತು ಅವರು ಗಾಯದ ಪ್ರಮಾಣಪತ್ರವನ್ನು ನೀಡಿದ್ದೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ:6) ಅ.ಸಾ.6 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 23.06.2025 ರಂದು ಸೀಲ್ ಮತ್ತು ಕವರ್ ಮಾಡಿದ್ದ ಒಂದು ಚಾಕು ಮತ್ತು ಮರದ ಕೋಲನ್ನು ಕಲಘಟಗಿ ಪೊಲೀಸರು ಪರೀಕ್ಷೆಗಾಗಿ ಅವರ ಮುಂದೆ ತಂದರು, ಪರೀಕ್ಷೆ ಮಾಡಿದಾಗ ಚಾಕು ಮತ್ತು ಮರದ ಕೋಲು ಕಂಡುಬಂದಿತ್ತು, ಅವರ ಅಭಿಪ್ರಾಯದಲ್ಲಿ, ನಿಶಾನೆ.ಪಿ.9 ಮತ್ತು 10 ರಲ್ಲಿ ಉಲ್ಲೇಖಿಸಲಾದ ಗಾಯಗಳು ಅವರು ಪರೀಕ್ಷಿಸಿದ ಚಾಕು ಮತ್ತು ಮರದ ಕೋಲು ಬಳಕೆಯಿಂದ ಉಂಟಾಗಿರಬಹುದು, ಅವರು ವಸ್ತುಗಳ ಪರೀಕ್ಷೆಯ ಬಗ್ಗೆ ಅಭಿಪ್ರಾಯ ಕೊಟ್ಟಿದ್ದು, ಆ ವಸ್ತುಗಳನ್ನು ಪರೀಕ್ಷಿಸಿದ ನಂತರ ಅವುಗಳನ್ನು ಸೀಲ್ ಮಾಡಿ ಪೊಲೀಸರಿಗೆ ಹಸ್ತಾಂತರಿಸಿದ್ದೇನೆ, ಗಾಯದ ಪ್ರಮಾಣಪತ್ರಗಳ ಜೊತೆಗೆ ಅವರು ಗಾಯಗೊಂಡಿರುವ ಎರಡೂ ವ್ಯಕ್ತಿಗಳ ಕೇಸ್ ಶೀಟ್ ಗಳನ್ನು ಒದಗಿಸಿದ್ದೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ:7) ಅ.ಸಾ.11 ಬಸವರಾಜ ಎದ್ದಲಗುಡ್ಡ ತಮ್ಮ ಸಾಕ್ಷ್ಯದಲ್ಲಿ, ದಿಃ 31/12/2024 ರಂದು ಕಿಮ್ಸ ಆಸ್ಪತ್ರೆಯಿಂದ ಎಂ.ಎಲ್.ಸಿ. ಪಡೆದು ಸಂಜೆ 6-30 ಗಂಟೆಗೆ ವಿಚಾರಣೆಗಾಗಿ ಆಸ್ಪತ್ರೆಗೆ ಹೋಗಿರುತ್ತೇನೆ, ಚಾಸಾ-1 ರವರನ್ನು ಭೇಟಿಯಾಗಿ ಅವರಿಂದ ನಿಪಿ-4 ರಂತೆ ದೂರು ಪಡೆದು ಠಾಣೆಗೆ ವಾಪಸ್ಸು ಬಂದು ಪ್ರ.ವ.ವರದಿಯನ್ನು ದಾಖಲಿಸಿಕೊಂಡಿರುತ್ತೇನೆ, ದೂರು ದಾಖಲಿಸಿದ ನಂತರ ಪ್ರ.ವ.ವರದಿಯನ್ನು ಸಿಎಚ್ ಸಿ-703 ರವರೊಂದಿಗೆ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ, ಮುಂದಿನ ತನಿಖೆಯನ್ನು ಚಾಸಾ-25 ರವರಿಗೆ ವಹಿಸಿರುತ್ತೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ:8) ಅ.ಸಾ.12 ಶ್ರೀಶೈಲ ಶಿವಪ್ಪ ಕೌಜಲಗಿ ತಮ್ಮ ಸಾಕ್ಷ್ಯದಲ್ಲಿ, ದಿಃ 31/12/2024 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ.24 ರವರಿಂದ ಪಡೆದು, ಅದೇ ದಿನ ಘಟನಾ ಸ್ಥಳಕ್ಕೆ

ಭೇಟಿ ನೀಡಿ ಘಟನಾ ಸ್ಥಳದಲ್ಲಿ ವಸ್ತುಗಳು ನಾಶವಾಗದಂತೆ ಚಾಸಾ.19 ಹಾಗೂ 20 ರವರನ್ನು ಬೆಂಗಾವಲಿಗಾಗಿ ನೇಮಿಸಿದೆನು ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ9) ಅ.ಸಾ.12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಚಾಸಾ.5 ರವರು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದಾರೆ ಅಥವಾ ಇಲ್ಲ ಎಂದು ಕಿಮ್ಸ್ ಆಸ್ಪತ್ರೆಯ ವೈದ್ಯರಿಂದ ಮಾಹಿತಿ ಪತ್ರ ಕಳುಹಿಸಿದೆನು, ಚಾಸಾ.5 ರವರು ಹೇಳಿಕೆಯನ್ನು ಕೊಡುವ ಸ್ಥಿತಿಯಲ್ಲಿ ಇದ್ದಾರೆ ಎನ್ನುವ ಮಾಹಿತಿಯನ್ನು ಪಡೆದು, ಚಾಸಾ.5 ರವರ ಹೇಳಿಕೆಯನ್ನು ಪಡೆದುಕೊಂಡೆನು, ಅದೇ ದಿನ ಚಾಸಾ.23 ರವರು ಎಫ್.ಐ.ಆರ್. ನ್ಯಾಯಾಲಯಕ್ಕೆ ಕೊಟ್ಟ ಬಗ್ಗೆ ಹೇಳಿಕೆಯನ್ನು ಪಡೆದುಕೊಂಡೆನು ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ10) ಅ.ಸಾ.12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 01/01/2025 ರಂದು ಚಾಸಾ.1 ರವರ ಎಂ.ಎಲ್.ಸಿ. ಬಂದಿದ್ದು ಅದನ್ನು ಪಡೆದುಕೊಂಡೆನು, ದಿಃ 03/01/2025 ರಂದು ಚಾಸಾ.1 ರವರ ಪುನಃ ಹೇಳಿಕೆಯನ್ನು ಪಡೆದಿರುತ್ತೆನೆ, ಚಾಸಾ.1 ರವರು ನಿಶಾನೆ.ಪಿ.5 ರಂತೆ ಹೇಳಿಕೆ ಕೊಟ್ಟಿರುತ್ತಾರೆ, ಅದೇ ದಿನ ಚಾಸಾ.1 ರವರು ತೋರಿಸಿದ ಘಟನಾ ಸ್ಥಳವನ್ನು ಪರಿಶೀಲಿಸಿ ಚಾಸಾ.2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿ, ಘಟನಾ ಸ್ಥಳದಲ್ಲಿಯ ವಸ್ತುಗಳಾದ ಸುಮಾರು 42 ಇಂಚು ಉದ್ದದ ಹಾಗೂ ಒಂದುವರೆ ಇಂಚು ಅಗಲದ ಕಾಡು ಕಟ್ಟಿಗೆ ಬಡಿಗೆ, ಸುಮಾರು ಹತ್ತುವರೆ ಇಂಚು ನೀಲಿ ಬಣ್ಣದ ಪ್ಲಾಸ್ಟಿಕ್ ಹಿಡಿಕೆ ಉಳ್ಳ ಒಂದು ಬದಿಗೆ ಹರಿತವಾದ ಮುಂಚೆ ಚೂಪು ಇರುವ ಅಲ್ಲಲ್ಲಿ ರಕ್ತ ಹತ್ತಿದ ಚಾಕು, ರಕ್ತ ಹತ್ತಿದ ಮಣ್ಣು, ರಕ್ತ ಹತ್ತದೇ ಇರುವ ಮಣ್ಣು ಇವುಗಳನ್ನು ಸುಕೋ ಅಧಿಕಾರಿ ಚಾಸಾ.11 ರವರಿಂದ ಪ್ಯಾಕ್ ಮಾಡಿ ಸೀಲ್ ಮಾಡಿಸಿರುತ್ತೆನೆ, ಸ್ಥಳದಲ್ಲಿ ನಿಶಾನೆ.ಪಿ.14 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೆನೆ, 1 ಫೋಟೋವನ್ನು ತೆಗೆಸಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ:11) ಅ.ಸಾ.12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಪ್ರಕರಣದಲ್ಲಿ ಸಾಕ್ಷಿದಾರರಾದ ಚಾಸಾ.2, 4, 6 ರಿಂದ 10 ರವರ ಹೇಳಿಕೆಗಳನ್ನು ಪಡೆದಿರುತ್ತೆನೆ, ಅದೇ ದಿನ ಚಾಸಾ.21 ಮತ್ತು 22 ರವರ ಹೇಳಿಕೆಯನ್ನು ಪಡೆದಿರುತ್ತೆನೆ, ನಂತರ ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ನ್ಯಾಯಾಲಯಕ್ಕೆ ಪಿ.ಎಫ್ ನಂ.1/2025 ದಾಖಲಿಸಿರುತ್ತೆನೆ, ಅದೇ ದಿನ ಚಾಸಾ.19 ರವರಿಂದ ಕಲಂ 63(4)(ಸಿ) ರಡಿಯಲ್ಲಿ ಪ್ರಮಾಣ ಪತ್ರ ಪಡೆದಿರುತ್ತೆನೆ ಹಾಗೂ ಅವರು ಸಹ ಕಲಂ 63(4)(ಸಿ) ರಡಿಯಲ್ಲಿ ಪ್ರಮಾಣ ಪತ್ರ ವನ್ನು ದಾಖಲಿಸಿರುತ್ತೆನೆ, ಅದೇ ದಿನ ಘಟನಾ ಸ್ಥಳವನ್ನು ವಾಚ್ ಮಾಡಿದ ಚಾಸಾ.19 ಮತ್ತು 20 ರವರು ತಮ್ಮ ವರದಿಗಳನ್ನು ಕೊಟ್ಟಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ:12) ಅ.ಸಾ.12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 07/01/2025 ರಂದು ಚಾಸಾ.13 ರವರಿಗೆ ಘಟನಾ ಸ್ಥಳದ ಉತಾರ ಪೂರೈಸುವಂತೆ ಮನವಿ ಪತ್ರ ಬರೆದಿರುತ್ತೆನೆ, ಅದೇ ದಿನ ಚಾಸಾ.15 ರವರಿಗೆ ಘಟನಾ ಸ್ಥಳದ ನಕಾಶೆಯನ್ನು ಪೂರೈಸುವಂತೆ ಮನವಿ ಪತ್ರ ಬರೆದಿರುತ್ತೆನೆ, ಚಾಸಾ.1 ಮತ್ತು 5 ರವರ ಗಾಯದ ಪ್ರಮಾಣ ಪತ್ರಗಳನ್ನು ಪೂರೈಸುವಂತೆ ಕಿಮ್ಸ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮನವಿ ಬರೆದಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ:13) ಅ.ಸಾ.12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 09/01/2025 ರಂದು ಮುದ್ದೆಮಾಲುಗಳ ಪರೀಕ್ಷೆಯ ಕುರಿತು ಆರ್.ಎಫ್.ಎಸ್.ಎಲ್. ಬೆಳಗಾವಿ ರವರಿಗೆ ಚಾಸಾ.17 ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೆನೆ ಹಾಗೂ ಅವರು ಆರ್.ಎಫ್.ಎಸ್.ಎಲ್. ಸ್ವೀಕೃತಿ ಪತ್ರವನ್ನು ಕೊಟ್ಟಿದ್ದು ಅದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡು ಚಾಸಾ.17 ರವರ ಹೇಳಿಕೆಯನ್ನು ಪಡೆದಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ:14) ಅ.ಸಾ.12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 14/01/2025 ರಂದು ಸದರಿ ಪ್ರಕರಣದಲ್ಲಿ ಗಾಯಾಳು ಬಸವರಾಜ ಮತ್ತು ಮೈಲಾರಪ್ಪ ರವರ ಗಾಯದ ಪ್ರಮಾಣ

ಪತ್ರ ಹಾಗೂ ಕೇಸ್ ಶೀಟ್ ಪಡೆಯಲು ಚಾಸಾ.12 ರವರಿಗೆ ಕೋರಿಕೆ ಪತ್ರ ಕಳುಹಿಸಿಕೊಟ್ಟಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ15) ಅ.ಸಾ.12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 22/01/2025 ರಂದು ಆರೋಪಿ 2 ರವರಾದ ನಿಮ್ಮನ್ನು ಹಾಜರುಪಡಿಸಲು ಚಾಸಾ.18 ಮತ್ತು 19 ರವರಿಗೆ ಜ್ಞಾಪನ ನೀಡಿದ ಪ್ರಕಾರ ಅವರು ಅದೇ ದಿನ ಆರೋಪಿ 2 ರವರಾದ ನಿಮ್ಮನ್ನು ಕರೆದುಕೊಂಡು ಬಂದು ಅವರ ಮುಂದೆ ಹಾಜರುಪಡಿಸಿ, ಅವರ ವರದಿಗಳನ್ನು ಕೊಟ್ಟಿರುತ್ತಾರೆ, ನಂತರ ಆರೋಪಿ 2 ರವರಾದ ನಿಮಗೆ ವಿಚಾರಣೆ ಮಾಡಿ ನಿಮ್ಮ ಸ್ವ ಖುಷಿ ಹೇಳಿಕೆ ಪಡೆದುಕೊಂಡು, ನೀವು ಅಪರಾಧ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದರಿಂದ ದಸ್ತಗಿರಿ ಮಾಡಿ ನಿಯಮಗಳನ್ನು ಪಾಲಿಸಿ ಆರೋಪಿ 2 ರವರಾದ ನಿಮ್ಮನ್ನು ನ್ಯಾಯಾಲಯಕ್ಕೆ ಕಳಹಿಸಿಕೊಟ್ಟಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ16) ಅ.ಸಾ.12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 29/01/2025 ರಂದು ಈ ಪ್ರಕರಣದಲ್ಲಿ ಗಾಯಾಳು ಚಾಸಾ.1 ಮತ್ತು 5 ರವರ ಗಾಯದ ಪ್ರಮಾಣ ಪತ್ರವನ್ನು ಪೂರೈಸುವಂತೆ ಚಾಸಾ.12 ರವರಿಗೆ ಇನ್ನೊಂದು ಕೋರಿಕೆ ಪತ್ರ ಕಳುಹಿಸಿಕೊಟ್ಟು, ಅದರ ಸ್ವೀಕೃತಿಯನ್ನು ಪಡೆದಿರುತ್ತೆನೆ, ದಿಃ 10/02/2025 ರಂದು ಚಾಸಾ.15 ರವರು ಘಟನಾ ಸ್ಥಳದ ನಕಾಶೆಯನ್ನು ಪೂರೈಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ, ದಿಃ 02/03/2025 ರಂದು ಚಾಸಾ.1 ಮತ್ತು 5 ರವರ ಗಾಯದ ಪ್ರಮಾಣ ಪತ್ರಗಳನ್ನು ಹಾಗೂ ಕೇಸ್ ಶೀಟ್ ನ್ನು ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ, ದಿಃ 04/03/2025 ರಂದು ಚಾಸಾ.13 ರವರು ಘಟನಾ ಸ್ಥಳದ 2 ಉತಾರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ17) ಅ.ಸಾ.12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 12/03/2025 ರಂದು ಚಾಸಾ.16 ರವರು ಆರ್.ಎಫ್.ಎಸ್.ಎಲ್. ಬೆಳಗಾವಿ ರವರು ವರದಿಯನ್ನು ಕೊಟ್ಟಿದ್ದು ಅದನ್ನು

ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಅದೇ ದಿನ ಸದರಿ ಪ್ರಕರಣದಲ್ಲಿ ಗಾಯದ ಬಗ್ಗೆ ಅಂತಿಮ ಅಭಿಪ್ರಾಯ ಪಡೆಯುವುದನ್ನು ಬಾಕಿ ಇಟ್ಟು ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರ ಸಲ್ಲಿಸಿರುತ್ತೇನೆ, ದಿಃ 28/06/2025 ರಂದು ಚಾಸಾ.12 ರವರು ಚಾಕು ಮತ್ತು ಕಟ್ಟಿಗೆಯನ್ನು ಪರೀಕ್ಷಿಸಿ ಅಂತಿಮ ಅಭಿಪ್ರಾಯವನ್ನು ಕೊಟ್ಟಿದ್ದು, ಸ್ವೀಕರಿಸಿರುತ್ತೇನೆ, ದಿಃ 19/11/2025 ರಂದು ನಿಶಾನೆ.ಪಿ.11 ನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ18) ನಿಮ್ಮ ಮೇಲಿನ ಈ ಪ್ರಕರಣದ ಬಗ್ಗೆ ಹೆಚ್ಚಿಗೆ ಏನಾದರೂ ಹೇಳುವುದಿದೆಯೇ?

ಉತ್ತರಃ

ಪ್ರಶ್ನೆಃ19) ನೀವು ಅಭಿರಕ್ಷೆ ಪರ ಸಾಕ್ಷಿಗಳನ್ನು ವಿಚಾರಣೆ ಮಾಡುವುದಿದೆಯಾ?

ಉತ್ತರಃ

(ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಓದಿ ಹೇಳಿ ವಿವರಿಸಿದ್ದು, ಆತನು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾನೆ ಎಂಬುವುದಾಗಿ ಈ ಮೂಲಕ ದೃಢೀಕರಿಸುತ್ತೇನೆ).

ದಿನಾಂಕಃ 04/08/2026

**(ಶ್ರೀಮತಿ ಜರೀನಾ)**
**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಧಾರವಾಡ.**